**ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.**

**SC.33/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ಡಾ. ಅನುಪಮಾ ಟಿ. ಜಿ. |
| ಗಂಡನ ಹೆಸರು | : | ಡಾ. ಗಂಗಾಧರ ಡಿ. ಜಿ. |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಹಿರಿಯ ತಜ್ಞರು, WCH, ಚಾಮರಾಜಪೇಟೆ, ದಾವಣಗೆರೆ |
| ವಾಸ ಸ್ಥಳ | : | ದಾವಣಗೆರೆ |

ಪಿ.ಡಬ್ಲ್ಯೂ 8

ಸಿ.ಡಬ್ಲ್ಯೂ 6

ದಿ: 30-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ (ಮಂಜುನಾಥ ಬಿ)**:

1. ಅಕ್ಟೋಬರ್ 2015 ರಿಂದ ದಿಃ 09-07-2025 ರವರೆಗೆ ನಾನು ದಾವಣಗೆರೆಯ ಸಿ.ಜಿ. ಆಸ್ಪತ್ರೆಯಲ್ಲಿ ಹಿರಿಯ ತಜ್ಞರಾಗಿ ಕೆಲಸ ಮಾಡಿದ್ದೇನೆ. ಈ ಪ್ರಕರಣದಲ್ಲಿ ದಿಃ 21-09-2022 ರಂದು ಸಂಜೆ 5.57 ಗಂಟೆಗೆ ನಾನು casualty ಯಲ್ಲಿ ಕೆಲಸ ಮಾಡುತ್ತಿರುವಾಗ, Anand Kumar S/o Nagaraj came with history of assault by 3 known persons armed with knife at 5.30 PM on 21-09-2022 at High school ground near Hindu Ganapathi Temple. On examination patient was conscious and oriented. On local examination;

2. * Lacerated wound left shoulder 5x1x0.5 cm. Patient refer to surgery department. There advise to wound suturing done and antibiotics and analgesics. ನನ್ನ

ಅಭಿಪ್ರಾಯದಲ್ಲಿ ಸಾಧಾ ಸ್ವರೂಪದ ಗಾಯಗಳು ಇರುತ್ತವೆ. ಇದರ ಬಾಬ್ತು ನಾನು ನೀಡಿರುವ ಗಾಯದ ಪ್ರಮಾಣ ಪತ್ರವನ್ನು ನಿಪಿ-9 ಅಂತ, ಸಾಕ್ಷಿಯ ಸಹಿಯನ್ನು ನಿಪಿ-9(ಎ) ಅಂತ ಗುರುತಿಸಲಾಯಿತು.

3. ಬಡಾವಣೆ ಪೊಲೀಸ್ ಠಾಣೆಯಿಂದ ತನಿಖಾಧಿಕಾರಿಗಳು ಗುನ್ನೆ 187/2022ರ ಪ್ರಕರಣದಲ್ಲಿ ಕೋರಿಕೆ ಪತ್ರವನ್ನು ನೀಡಿದ್ದು, ಅದರ ಜೊತೆ ಒಂದು ಚಾಕುವನ್ನು ಸಹ ತಂದಿದ್ದರು. ಆ ಪ್ರಕಾರ PF.No.93/2022 ನಮೂದಿಸಿದ ಚಾಕುವಿನಿಂದ ಪಿರ್ಯಾದಿಗೆ ಹಲ್ಲೆ ಮಾಡಿದ್ದಲ್ಲಿ ತಾನುನೀಡಿರುವ ಗಾಯದ ಪ್ರಮಾಣದಲ್ಲಿ ನಮೂದಿಸಿರುವ ಗಾಯಗಳು ಸಂಭವಿಸುತ್ತವೇ ಅಥವಾ ಇಲ್ಲವೇ ಎಂದು ಕೋರಿಯ ಪತ್ರವನ್ನು ಸಲ್ಲಿಸಿದ್ದರು. ಆ ಕೋರಿಕೆಯ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-10 ಅಂತ ಗುರುತಿಸಲಾಯಿತು. ನಾನು ದಿಃ 20-06-2023ರಂದು ಸದರಿ ಕೋರಿಕೆಯ ಪತ್ರವನ್ನು ಸ್ವೀಕರಿಸಿರುತ್ತೇನೆ. ನನ್ನ ಅಭಿಪ್ರಾಯದಲ್ಲಿ ಪೊಲೀಸರು ಹಾಜರುಪಡಿಸಿದ ಚಾಕುವಿನಿಂದ ಹಲ್ಲೆ ಮಾಡಿದರೆ ಗಾಯದ ಪ್ರಮಾಣ ಪತ್ರದಲ್ಲಿ ನಮೂದು ಮಾಡಿರುವ ಗಾಯಗಳು ಸಂಭವಿಸುತ್ತವೆ ಅಂತ ವರದಿ ಕೊಟ್ಟಿದ್ದೇನೆ. ಅಭಿಪ್ರಾಯ ವರದಿಯನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-11 ಅಂತ, ಸಾಕ್ಷಿಯ ಸಹಿಯನ್ನು ನಿಪಿ-11(ಎ) ಅಂತ ಗುರುತಿಸಲಾಯಿತು. ಸದರಿ ಚಾಕುವನ್ನು ಸಾಕ್ಷಿಗೆ ತೋರಿಸಲಾಗಿ, ಸಾಕ್ಷಿಯು ಚಾಕುವನ್ನು ನೋಡಿ ಗುರುತಿಸುತ್ತಾರೆ. ಸದರಿ ಚಾಕುವನ್ನು ಈಗಾಗಲೇ ಮು.ಮಾ.3 ಅಂತ ಗುರುತಿಸಲಾಗಿದೆ. ಸದರಿ ಚಾಕುವನ್ನು ಪೊಲೀಸರು ಹಾಜರುಪಡಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಎಸ್.ಜೆ.ಕೆ., ವಕೀಲರಿಂದ ಆರೋಪಿತರ ಪರವಾಗಿ**:

4. It is true that the age of the injuries not stated in the wound certificate. It is also true that the direction of the wound not stated in the wound certificate. ರಸ್ತೆಯಲ್ಲಿರುವಂತಹ ಅನೇಕ ಗುಂಡಿಗಳಲ್ಲಿ ಒಬ್ಬ ವ್ಯಕ್ತಿ ಹೋಗುತ್ತಿರುವಾಗ ಬಿದ್ದರೆ ಗಾಯದ ಪ್ರಮಾಣ

ಪತ್ರದಲ್ಲಿ ನಮೂದು ಮಾಡಿರುವ ಗಾಯಗಳು ಆಗುತ್ತವೆ ಅಂದರೆ ನಿಜ. ನಾನು ನೀಡಿರುವ ಗಾಯ ಪ್ರಮಾಣ ಪತ್ರದ ಅಭಿಪ್ರಾಯ ತಪ್ಪು ಇರುತ್ತದೆ ಅಂದರೆ ಸರಿಯಲ್ಲ.

**ಮರುವಿಚಾರಣೆಃ** ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓದಿ, ಹೇಳಿ, ಕೇಳಿ, ಸರಿ ಇದೆ.

Sd/-

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.